ತುಮಕೂರಿನ ಎಸ್. ನಟರಾಜ ಬೂದಾಳು ಕವಿ, ಕಥೆಗಾರ. ತತ್ವಪದಗಳು, ಬುದ್ಧಚಿಂತನೆಗಳ ಜಿಜ್ಞಾಸಿ. ರಾಜ್ಯ ಸರ್ಕಾರ ಪ್ರಕಟಿಸಿದ ಸಮಗ್ರ ತತ್ವಪದ ಸಾಹಿತ್ಯ ಯೋಜನೆಯ ಪ್ರಧಾನ ಸಂಪಾದಕರು. 'ಬುದ್ಧನೆಂಬ ಜ್ಞಾನಪೂರ್ಣ ಜಗಂಜ್ಯೋತಿ', 'ಬುದ್ಧ ಗುರುವಿನ ಮಧ್ಯಮ ಮಾರ್ಗ', 'ಪ್ರತ್ಯೇಕ ಬುದ್ಧ ಅಲ್ಲಮಪ್ರಭು', 'ಕನ್ನಡ ಕಾವ್ಯಮೀಮಾಂಸೆ', 'ನಾಗಾರ್ಜುನನ ಮೂಲಮಾಧ್ಯಮಕಕಾರಿಕಾ', 'ನಾಗಾರ್ಜುನನ ನುಡಿ ಕತೆಗಳು', 'ಸರಹಪಾದ', 'ನಾಗರ್ಜುನನ ಮಧ್ಯಮ ಮಾರ್ಗ' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದಕ್ಕಾಗಿ ನೀಡುವ ಪ್ರಶಸ್ತಿಗೆ ಭಾಜನರು.

ನುಗ್ಗಿ ಬಂತು. ಒಮ್ಮೆ ಸಣ್ಣಹುಡುಗನಿದ್ದಾಗ ಅವ್ವ ನಾಲ್ಕಾಣೆಯ ಎರಡು ಪಾವಲಿಗಳನ್ನು ಕೊಟ್ಟು ಒಳ್ಳೆಣ್ಣೆ ತರಲು ಕಳಿಸಿತ್ತು. ಅದೆಲ್ಲಿತ್ತೋ ಈವಜ್ಜ ಬಂದು ನನ್ನ ಕೈಲಿದ್ದ ಎರಡು ಪಾವಲಿಗಳಲ್ಲಿ ಒಂದನ್ನು ಮಾತ್ರ ಪರಕ್ಕನೆ ಈಸಿಕೊಂಡು ಸಿದ್ದಿಂಗಮ್ಮನ ಹೋಟಲ್ಲಿನ ಕಡೆಗೆ ಹೋಯಿತು. ಇವನಿಗೆ ಏನು ಮಾಡಲೂ ತೋಚದೆ ಅಳುತ್ತ ಮನೆಗೆ ಹೋಗಿ ಅವ್ವನಿಗೆ ಆದದ್ದನ್ನು ಹೇಳಿದ. ಅವ್ವ ಬಯ್ಯುತ್ತೆ ಅಂದುಕೊಂಡಿದ್ದ. ಆದರೆ, ಹಾಗೇನೂ ಆಗಲಿಲ್ಲ. ಅವ್ವ, 'ಅಂಗೇನೋ. ಓಗ್ಲಿಬಿಡು ಒಳ್ಳೇದಾಗುತ್ತೆ' ಅಂತು! ಇದೇನು ಅವ್ವ ಇಂಗಂತಲ್ಲ ಅಂತಾ ಗೊಂದಲವಾಗಿತ್ತು. ಇವತ್ತು ನೋಡಿದರೆ ಇದ್ದಕ್ಕಿದ್ದ ಹಾಗೆ ಅಜ್ಜ ನಮ್ಮ ಹೊಲದಲ್ಲಿ ಹೆಸರು ಕಾಯಿ ಕೊಯ್ಯುತ್ತಿದೆ. ಅವಜ್ಜನ ಹತ್ತಿರಕ್ಕೆ ಹೋಗಿ ಸುಮ್ಮನೆ ಹಿಂದೆ ನಿಂತ. ಅವಜ್ಜ ಇವುನ್ನ ನೋಡಿದರೂ ನೋಡದಂತೆ ಒಂದೆರಡು ಹಿಡಿ ಹೆಸರುಕಾಯಿ ಕೊಯ್ದು ಬಗಲಿನ ಜೋಬಿಗೆ ಹಾಕಿಕೊಂಡು, 'ಬಾ ಈ ಚೀಲನ ಸ್ವಲ್ಪ ದೂರ ತಗಾ' ಅಂತ ಆ ಗೋಣಿಚೀಲನ ಇವನ ಹೆಗಲಿಗೆ ಹಾಕಿತು. ಇದೇನು ಯಾರಿಗೂ ಎಂದೂ ಕೊಡದ ಚೀಲವನ್ನು ನನ್ನ ಹೆಗಲಿಗೆ ಹಾಕಿತಲ್ಲ ಅನ್ನಿಸಿತು. ನೋಡಲು ಹಾಗನ್ನಿಸದಿದ್ದರೂ ಅದೊಂದು ಹೆಣಭಾರದ ಚೀಲ. ಅದು ಇಷ್ಟು ವಜನ್ನಾಗಿದೆ ಅನ್ನೋದು ಯಾರಿಗೂ ಗೊತ್ತಾಗುವಂತಿರಲಿಲ್ಲ. ಅವಜ್ಜ ಯಾರಿಗೂ ಈ ಗೋಣಿಚೀಲನ ಕೊಟ್ಟಿರಲಿಲ್ಲ, ಯಾರೂ ಕೈಯಿಕ್ಕಲು ಬಿಟ್ಟಿರಲಿಲ್ಲ. ಇವತ್ತು ಅದೇನು ಗ್ನಾನ ಬಂತೋ ಇವನ ಹೆಗಲಿಗೆ ಹೊರಿಸಿ 'ನನ್ನ ಹಿಂದೆ ಬಾ' ಅಂತ ಹೇಳಿ ತಿರುಗಿ ನೋಡದೆ ಹೊರಟೇ ಬಿಟ್ಟಿತು. ಏನೋ ಮಂಪರು ಆವರಿಸಿದ ಹಾಗೆ ಅವಜ್ಜನ ಹಿಂದೆ ಹೆಗಲಿಗೆ ಗೋಣಿಚೀಲ ಹಾಕಿಕೊಂಡು ಗುರುಸ್ವಾಮಿ ಹೊರಟ. ನೋಡನೋಡುತ್ತಿದ್ದಂತೆ ಅವಜ್ಜ ದೊಡ್ಡೆಜ್ಜೆ ಹಾಕುತ್ತ ಇವನಿಂದ ಮುಂದಕ್ಕೆ ಹೋಗೇಬಿಟ್ಟಿತ್ತು. ಹೋಗಹೋಗುತ್ತ ಕಾರೇಕಾವಲಿನ ಗಿಡಗಳ ನಡುವೆ ಮರೆಯಾಗಿಬಿಡ್ತು. ಇವನಿಗೆ ಗಾಬರಿ ಸುಸ್ತು ಬಾಯಾರಿಕೆ ಎಲ್ಲ ಆಗಿ ಹಾಗೇ ಅಲ್ಲೇ ಕುಸಿದು ಕೂತ. ಮುಂದೇನು ಮಾಡಬೇಕೆಂದು ತೋಚಲಿಲ್ಲ. ಆಗಲೇ ಹೊತ್ತು ಇಳಿಯುತ್ತಿತ್ತು. ಮಧ್ಯಾಹ್ನ ಉಂಡಿರಲಿಲ್ಲ. ಗೋಣಿಚೀಲದಲ್ಲಿ ಏನಾದರೂ ಸಿಕ್ಕಾತು ಅಂತ ಅದರ ಬಾಯಿಗೆ ಕಟ್ಟದ್ದ ಪುಂಡಿಹುರಿ ಸಡಿಲಿಸಿ ಒಳಕ್ಕೆ ಕೈಹಾಕಿದ. ಇದ್ದಕ್ಕಿದ್ದ ಹಾಗೆ ಅದರೊಳಗಿದ್ದ ಎರಡು ಸರ್ಪಗಳು ಬುಸುಗುಡುತ್ತಾ ಅವನ ಕೈಯಿಗೆ ಸುತ್ತಿಕೊಂಡೇ ಹೊರಬಂದು ಇವನನ್ನು ಆವರಿಸಿಕೊಂಡುಬಿಟ್ಟವು! ಓ ನನ್ನ ಪಾಡು ಮುಗೀತು ಅನ್ನಿಸಿತು. ಅತ್ತಿತ್ತ ಸರಿಯದ ಹಾಗೆ ಸರ್ಪಗಳು ಹಿಡಿತ ಬಿಗಿಗೊಳಿಸಿದವು. ಅಜ್ಜಾ ಅಂತಾ ಕೂಗಲು ಬಾಯಿ ತೆರೆದ. ಗಂಟಲಿನಿಂದ ದನಿ ಬರಲಿಲ್ಲ. ಆಕಡಿಗೊಂದು ಈಕಡಿಗೊಂದು ಸರ್ಪಗಳು ಮಕಕ್ಕೆ ಎದುರಾಗಿ ನಿಂತು ತನ್ನನ್ನೇ ನೋಡುತ್ತಿವೆ. ಇನ್ನೇನು ಜೀವ ಹೋಗುತ್ತೆ ಅನ್ನೋ ಭಯದಿಂದ ಮತ್ತೊಮ್ಮೆ ಅಜ್ಜಾ ಎಂದು ಜೋರಾಗಿ ಕೂಗುತ್ತ ಏಳಲು ತನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿ ಸರ್ಪಗಳನ್ನು ಒದರಿ ಬುದೂರನೆ ಎದ್ದ!

...ಮೈಯೆಲ್ಲ ಬೆವತು ನೆಂದು ಹೋಗಿದ್ದ ಗುರುಸ್ವಾಮಿ ಅಪ್ಪಾ ಗುರುವೇ ಎಂಥಾ ಕನಸಪ್ಪಾ ಇದು ಎಂದು ಸುತ್ತ ನೋಡುತ್ತಾನೆ ಯಾರೂ ಇಲ್ಲ. ಸರ್ಪಗಳೂ ಇಲ್ಲ ಅಜ್ಜನೂ ಇಲ್ಲ! ಸ್ವಲ್ಪಹೊತ್ತು ಎದೆ ಬಡಿದುಕೊಳ್ಳುತ್ತಲೇ ಇತ್ತು. ಓ ರಾತ್ರಿ ಮಠದ ಮೂಲೆಯಲ್ಲಿ ಕೂತು ಅಲ್ಲೇ ಮಲಗಿರುವುದು ನೆನಪಿಗೆ ಬಂತು. ಟವಲ್ಲಿನಿಂದ ಮಕಾ ಒರೆಸಿಕೊಂಡ. ಆಗಲೇ